ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.).—

ಅ) ಧರ್ಮಸ್ಥಳದ ಧರ್ಮಾಧಿಕಾರಿಗಳು ಕಾರ್ಯಗತ ಮಾಡುವ ಯೋಜನೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಲ್ಲ.

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳು ಅನುಷ್ಠಾನಗೊಳಿಸುತ್ತಿರುವ ಗ್ರಾಮಾಭಿವೃದ್ಧಿ ಕಾರ್ಯಕ್ರಮವು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಪ್ರತಿ ರೂಪವಲ್ಲ.

ನಗರ ಸಭೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ವೇತನದ ಬಗ್ಗೆ

೬೪೩ (ಸಿ) ಶ್ರೀ ಪಂಪಾಪತಿ. (ದಾವಣಗೆರೆ)—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರಸಭೆಗಳಲ್ಲಿ ದುಡಿಯುತ್ತಿರುವ ದಿನಗೂಲಿ ಕೆಲಸಗಾರರಿಗೆ ಅದೇ ಕೆಲಸ ಮಾಡುವ ಮಾಸಿಕ ವೇತನ ಪಡೆಯುವವರಿಗೆ ಸರಿಸಮಾನವಾದ ವೇತನ ಕೊಡುತ್ತಿದ್ದಾರೆಯೇ

ಆ) ಹಾಗಿಲ್ಲದಿದ್ದಲ್ಲಿ ಇದು ತಾರತಮ್ಯ ವಾಗುವುದಿಲ್ಲವೇ;

ಇ) ಸರಿಸಮಾನ ಕೆಲಸಕ್ಕೆ ತಾರತಮ್ಯವಿಲ್ಲದೆ ಸರಿಸಮಾನ ವೇತನ ದಿನಗೂಲಿಗಳಿಗೂ ದೊರಕು ವಂತೆ ಮಾಡಲು ಸರ್ಕಾರದವರಂ ಏನೂ ಕ್ರಮ ಕೈಗೊಳ್ಳುವರಂ?

ಶ್ರೀ ಎ. ಲಕ್ಷ್ಮೀಸಾಗರ್. (ಕಾನೂನು ಸಂಸದಿಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಮಂತ್ರಿಗಳು)—

ಅ) ನಗರ ಪುರಸಭೆಗಳಲ್ಲಿ ದಿನಗೂಲಿಯನ್ವಯ ಕೆಲಸ ಮಾಡುವ ನೌಕರರಿಗೆ ನಿಯಮಾನುಸಾರ ನೇಮಕಾತಿ ಮಾಡಿದ ನೌಕರರಿಗೆ ಕೊಡುತ್ತಿರುವ ವೇತನವನ್ನು ಕೊಡುವಂತೆ ಈಗಾಗಲೇ ಆದೇಶಿಸಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬಳ್ಳಾರಿ ನಗರದ ಕುಡಿಯುವ ನೀರಿನ ಯೋಜನೆ ಬಗ್ಗೆ

೪೮೭. ಶ್ರೀ ಎಂ. ರಾಮಪ್ಪ (ಬಳ್ಳಾರಿ)—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಬಳ್ಳಾರಿ ನಗರದ ಕುಡಿಯುವ ನೀರಿನ ಯೋಜನೆ ಎಂಡನೇ ಹಂತದ ಸಲುವಾಗಿ ಈವರೆಗೆ ಖರ್ಚು ಮಾಡಿದ ಹಣವೆಷ್ಟು ಹಾಗೂ ಈ ಖರ್ಚು ಯಾವ ಯಾವ ಕೆಲಸಗಳಿಗೆ ಮಾಡಲಾಗಿದೆ?

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು, ಸಂಸದಿಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು)—

ಈ ಯೋಜನೆಗೆ ಜುಲೈ ೧೯೮೬ರ ವರೆಗೆ ೪೧.೬೧ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ಈ ಹಣವನ್ನು ಕೆಳಕಂಡ ಕೆಲಸಗಳಿಗಾಗಿ ಖರ್ಚು ಮಾಡಲಾಗಿದೆ.

೧) ೩ ಲಕ್ಷ ಗ್ಯಾಲನ್ ಸಾಮರ್ಥ್ಯದ ಎರಡು ಮೇಲ್ಮಟ್ಟದ ಜಲಸಂಗ್ರಹಾರಗಳು (ಒಂದು ಲಾಲ ಕಮಾನ ಹತ್ತಿರ ಮತ್ತೊಂದು ಟಿ. ಬಿ. ಸ್ಯಾನಿಟೋರಿಯಂ ಹತ್ತಿರ)

೨) ಏರು ಕೊಳವೆ ಮಾರ್ಗ ಮತ್ತು ವಿತರಣಾ ಕೊಳವೆ ಮಾರ್ಗಗಳಿಗೆ ಬೇಕಾಗುವ ವಿವಿಧವ್ಯಾಸ ಉಳ್ಳ ಪಿ.ಎಸ್.ಸಿ.ಪೈಪುಗಳು.

೩) ತುಂಗಭದ್ರಾ ಮೇಲ್ಮಟ್ಟದ ಕಾಲುವೆಯಲ್ಲಿ ಮೂಲಸ್ಥಾವರವನ್ನು ಕಟ್ಟುವುದು.